**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ.520-2018**

**ಸಿ.ಡಬ್ಲ್ಯೂ- 2 ಪಿ.ಡಬ್ಲ್ಯೂ- 2**

| | | |
|---|---|---|
| ಸಾಕ್ಷಿದಾರರ ಹೆಸರು | : | ಲಿಂಗರಾಜು |
| ತಂದೆಯ/ ಗಂಡನ ಹೆಸರು | : | ಲಿಂಗನಾಯಕ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಉಪ ವಲಯ ಅರಣ್ಯ ಅಧಿಕಾರಿ |
| ವಾಸ ಸ್ಥಳ | : | ಸಾಗರೆ |

**ದಿನಾಂಕ 30.08.2025 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು 17.10.2017 ರಿಂದ 11.03.2024 ರವರೆಗೆ ಉಪ ವಲಯ ಅರಣ್ಯ ಅಧಿಕಾರಿಯಾಗಿ ಸರಗೂರು ವಲಯದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 11.04.2018 ರಂದು ಮದ್ಯಾಹ್ನ 03 ಗಂಟೆಯ ಸಮಯದಲ್ಲಿ ಚಿಕ್ಕದೇವಮ್ಮ ಬೆಟ್ಟ ಅರಣ್ಯ ಪ್ರದೇಶದಲ್ಲಿ ನಾನು, ಚಾಸಾ-1, 3 ಮತ್ತು 4 ರವರು ಗಸ್ತು ಮಾಡುತ್ತಿದ್ದಾಗ ಲಂಕೆ ಗಸ್ತಿನ ಲಂಕೆ ಶಾಖೆಯ ಎಡಭಾಗದ ಅರಣ್ಯ ಪ್ರದೇಶದಲ್ಲಿ ಆರೋಪಿತರು ಕಾಡನ್ನು ಕಡೆಯುತ್ತಿದ್ದರು, ಆಗ ನಾವುಗಳು ಏಕೆ ಕಡಿಯುತ್ತಿದ್ದೀರಿ ಎಂದು ಕೇಳಿದಾಗ, ಆರೋಪಿ-1 ಮತ್ತು 2 ರವರು ನಮಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ನಂತರ ಆರೋಪಿತರು ಚಾಸಾ-1 ರವರಿಗೆ ದೊಣ್ಣೆಯಿಂದ ಹೊಡೆದಿರುತ್ತಾರೆ, ನಂತರ ಆರೋಪಿ-3 ರವರು ನನಗೂ ಸಹ ದೊಣ್ಣೆಯಿಂದ ಹೊಡೆದು ಸರ್ಕಾರಿ

ಕೆಲಸಕ್ಕೆ ಅಡ್ಡಿ ಪಡಿಸಿರುತ್ತಾರೆ. ಚಾಸಾ -3 ಮತ್ತು 4 ರವರು ಸಮದಾನ ಮಾಡಿ ಜಗಳ ಬಿಡಿಸಿರುತ್ತಾರೆ, ನಮಗೆ ಸಣ್ಣಪುಟ್ಟ ಗಾಯಗಳಾಗಿದ್ದರಿಂದ ಇಲಾಖಾ ವಾಹನದಲ್ಲಿ ನಾನು ಹೆಚ್.ಡಿ.ಕೋಟೆಯ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ, ನಂತರ ಕೇಂದ್ರ ಸ್ಥಾನಕ್ಕೆ ವಾಪಸ್ಸು ಆಗಿ ಮೇಲಾಧಿಕಾರಿಗಳಿಗೆ ವಿಚಾರ ತಿಳಿಸಿರುತ್ತೇವೆ. ಚಾಸಾ-1 ರವರ ಸಮವಸ್ತ್ರವನ್ನು ಆರೋಪಿ-2 ಮತ್ತು 3 ರವರು ಹರಿದುಹಾಕಿರುತ್ತಾರೆ. ದಿನಾಂಕಃ 14.04.2018 ರಂದು ಹೇಳಿಕೆ ಕೊಟ್ಟಿರುತ್ತೇನೆ. ಸಾಕ್ಷಿ ಮುದ್ದೆಮಾಲು 1 ರಿಂದ 3 ನೋಡಿ ಗುರುತಿಸಿರುತ್ತಾರೆ. ದಿನಾಂಕಃ 14.04.2018 ರಂದು ಹೇಳಿಕೆ ನೀಡಿರುತ್ತೇನೆ. ಆರೋಪಿ-1 ರವನ್ನು ನೋಡಿ ಗುರುತಿಸಿರುತ್ತಾರೆ, ಆರೋಪಿ-2 ಮತ್ತು 3 ಗೈರು ಹಾಜರಿದ್ದು, ಅವರನ್ನು ಗುರುತಿಸುವಲ್ಲಿ ಆರೋಪಿ ಪರ ವಕೀಲರ ತಕರಾರು ಇರುವುದಿಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ನಮ್ಮ ಕೇಂದ್ರ ಕಚೇರಿ ಸರಗೂರಿನಲ್ಲಿರುತ್ತದೆ. ಸರಗೂರನ್ನು ಬೆಳಿಗ್ಗೆ 08 ಗಂಟೆಗೆ ಬಿಟ್ಟು ಪುರದಕಟ್ಟೆ ಮನುಗನಹಳ್ಳಿ ಮಾರ್ಗವಾಗಿ ಹೋಗಿರುತ್ತೇನೆ. ಸದರಿ ಘಟನಾ ಸ್ಥಳದ ಹಿಂಭಾಗ ಕಂದಾಯ ಜಮೀನು ಇರುತ್ತದೆ ಎಂದರೆ ಅರಣ್ಯ ಪ್ರದೇಶವನ್ನು ಹೊತ್ತುವರಿ ಮಾಡಿಕೊಂಡಿರುವ ಜಮೀನು ಎಂದು ನುಡಿಯುತ್ತಾರೆ. ಕಂದಾಯ ಜಮೀನನ ಗಡಿ ಗುರುತಿಸಿರುವುದಿಲ್ಲ. ಮುಂದುವರೆದು. ಆರೋಪಿತರು ಏನು ಮಾಡಿರುತ್ತೆರೆಂದು ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ. ಸದರಿ ಸಮಯದಲ್ಲಿ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ರೈತರು ಸ್ಥಳಕ್ಕೆ ಬಂದಿರುವುದಿಲ್ಲ. ಘಟನಾ ಸ್ಥಳಕ್ಕೆ ಹೆಚ್.ಡಿ.ಕೋಟೆ ಅಥವಾ ಸರಗೂರು ಯಾವುದು ಹತ್ತಿರ ಎಂದರೆ ಸರಗೂರು. ನಾನು ಸಹ ಸರಗೂರಿನಲ್ಲಿ ವಾಸ ಇರುತ್ತೇನೆ. ಸದರಿ ದಿನ ಮನೆಗೆ ಹೋಗದೆ ನೇರವಾಗಿ ಆಸ್ಪತ್ರೆಗೆ ಹೋಗಿರುತ್ತೇನೆ. ಸರಗೂರಿನಲ್ಲಿ ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆ ಇರುತ್ತದೆ. ನಾನು ಹೆಚ್.ಡಿ.ಕೋಟೆ ಸರ್ಕಾರಿ ಆಸ್ಪತ್ರೆಯಲ್ಲಿ ನಾನು ಒಳರೋಗಿಯಾಗಿ ಚಿಕಿತ್ಸೆ ಪಡೆದಿರುವುದಿಲ್ಲ. ಚಾಸಾ-1 ರವರು ನನ್ನ ಸಹೊದ್ಯೋಗಿಯಾಗಿರುತ್ತಾರೆ, ನನ್ನ ಮೇಲಾಧಿಕಾರಿಯಲ್ಲ. ಅದೇ ದಿನ ನೀವು ದೂರು ಕೂಡಲು ತೊಂದರೆ ಇತ್ತ ಎಂದರೆ ಮೇಲಾಧಿಕಾರಿಗಳಿಗೆ ತಿಳಿಸಬೇಕಾಗಿರುತ್ತಾರೆ ಎಂದು ನುಡಿಯುತ್ತಾರೆ. ನನಗೆ ಯಾರು ಹಲ್ಲೆ ಮಾಡಿರುತ್ತಾರೆಂದು ವೈದ್ಯರ ಬಳಿ ಹೇಳಿರುತ್ತೇನೆ. ಸದರಿ ದಿನ ಪೋಲೀಸರು ಆಸ್ಪತ್ರೆಗೆ ಬಂದಿರುತ್ತಾರೆ, ಸದರಿ ದಿನ ನನ್ನ ಹೇಳಿಕೆ ಪಡೆದುಕೊಂಡಿರುವುದಿಲ್ಲ ನನ್ನನ್ನ ವಿಚಾರಿಸಿರುತ್ತಾರೆ. ನಾನು ಯಾವುದೇ ಚಿಕಿತ್ಸೆ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಕೇಂದ್ರ ಕಚೇರಿಗೆ ಹೋಗಬೇಕಾದರೆ ಪೋಲಿಸ್ ಠಾಣೆ ಮುಂಭಾಗ ಹೋಗಬೇಕಾಗುತ್ತದೆ ಎಂದರೆ

ಸರಿ. ಆಗ ದೂರು ದಾಖಲಿಸಿಲ್ಲ ಎಂದರೆ ಸರಿ. ದಿನಾಂಕ 11.004.2018 ರಂದು ಕರ್ತವ್ಯಕ್ಕೆ ಹೋಗಿರುತ್ತೇನೆ. ಮೇಲಾಧಿಕಾರಿಗಳಿಗೆ ಕವೇರಿಗೆ ಹೋಗಿ ಮೌಖಿಕವಾಗಿ ತಿಳಿಸಿರುತ್ತೇನೆ, ಚಾಸಾ-1 ರವರು ಬರವಣಿಗೆಯಲ್ಲಿ ತಿಳಿಸಿರುತ್ತಾರೆ. ಮುದ್ದೇಮಾಲುಗಳಂತ ವಸ್ತುಗಳು ಸಾಮಾನ್ಯವಾಗಿ ಕಾಡಿನಲ್ಲಿ ಸಿಗುತ್ತದೆ ಎಂದರೆ ಸರಿ. ವಿಲೇವಾರಿಯಾಗದ ಪ್ರಕರಣದ ಮುದ್ದೇಮಾಲುಗಳನ್ನು ಈ ಪ್ರಕರಣಕ್ಕೆ ಅಳವಡಿಸಿ ಸುಳ್ಳು ದೂರನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು).

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು, ಹೆಚ್.ಡಿ.ಕೋಟೆ.**